At 8-30 p.m. the patient's case was again reviewed and the risk was explained to the ralatives of the patient as also to the patient. It was decided to operate the patient immediately with all risks under spainal anaesthesia. The obstetrician and Gynaccologist of the Hospital with the help of paediatrician, Residental Medical Officer, District Surgeon and the casualty Medical Officer, operated between 10 p.m. and 12 Mid-night. The operation was successful and the dead foetus was extracted. The patient recovered uneventfully. About Rs. 76/- worth drugs were purchased and given from the poor fund. The patient is still in the hospital and recovering satisfactorily at Manjya. She was not removed to Mysore. I understand she has now been discharged.

ಶ್ರೀ ಪಿಚ್. ಟಿ. ಕೃಷ್ಣಪ್ಪ —ಮಾನ್ಯ ಅಧ್ಯಕ್ಷರೇ, ಈ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ ಉದ್ದೇಶ, ಆ ಆಸ್ಪತ್ರೆಯಲ್ಲಿನ ವೈದ್ಯರ ಕರ್ತವ್ಯಲೋಪವನ್ನು ಸರ್ಕಾರದ ಗಮನಕ್ಕೆ ತರ ಬೇಕೆಂದಲ್ಲ. ಅಲ್ಲಿನ ವೈದ್ಯರು, ತಮ್ಮ ಭಾಗದ ಕೆಲಸವನ್ನು ಬಹಳ ಶ್ರದ್ಧೆಯಿಂದ ನಿರ್ವಹಣೆ ಮಾಡಿ ದ್ದಾರೆ. ಆ ದಿವಸ, ರೋಗಿಗೆ ಶಸ್ತ್ರ ಚಿಕಿತ್ಸೆ ಮಾಡಲು ಸಾಧ್ಯವಿಲ್ಲ ಎನ್ನುವ ಕಾರಣವನ್ನು ಅಲ್ಲಿನ ವೈದ್ಯರು ಕೊಡಬೇಕಾದರೆ, ಸುಮಾರು ಆರು ತಿಂಗಳಿನಿಂದ ಅನಾಸ್ತೆಶ್ಯಾ ಕೊಡುವ ಯಂತ್ರ ಕೆಟ್ಟು ನಿಂತಿರುವುದೇ ಕಾರಣವಾಗಿದೆ. ಜಿಲ್ಲಾ ಕೇಂದ್ರಗಳಲ್ಲಿರುವ ಇಂಥಾ ಒಂದು ಆಸ್ಪತ್ರೆಯಲ್ಲಿ, ಈ ರೀತಿಯ ಯಂತ್ರ ಕೆಟ್ಟು ಹೋದರೆ, ಅಲ್ಲಿಗೆ ಸರ್ಜನನ್ನು ನೇಮಕ ಮಾಡಿರುವುದರಿಂದ ಏನು ಪ್ರಯೋಜನ? ಆ ಆಸ್ಪತ್ರೆಗೆ ಸೀರಿಯಸ್ ಕೇಸ್‌ನ ಯಾವ ರೋಗಿ ಹೋದರೂ ಮೈಸೂರು ಅಥವಾ ಬೆಂಗಳೂರು ನಗರದ ಆಸ್ಪತ್ರೆಗಳಿಗೆ ಸಾಗಿಸ ಬೇಕಾದ ಪರಿಸ್ಥಿತಿ ಇದೆ. ಒಂದು ಸಣ್ಣ ಯಂತ್ರ ಕೆಟ್ಟುಹೋದಾಗ ಅದನ್ನು ಕೂಡಲೇ ಸರಿಪಡಿಸದೇ ಹೋದರೆ, ನಾವು ಆಸ್ಪತ್ರೆಗಳಿಗಾಗಿ ಎಷ್ಟು ಹಣ ವಿಚ್ರ್ ಮಾಡಿದರೂ ಏನೂ ಪ್ರಯೋಜನವಿಲ್ಲ ಮತ್ತು ರೋಗಿಗಳಿಗೂ ಅನುಕೂಲವಾಗುವುದಿಲ್ಲ. ಆ ಆಸ್ಪತ್ರೆಯಲ್ಲಿ ಈ ಯಂತ್ರ ಕೆಟ್ಟಿರುವುದರಿಂದ ಶಸ್ತ್ರ ಚಿಕಿತ್ಸೆ ಸ್ಥಗಿತವಾಗಿದೆ. ಈ ಯಂತ್ರ ಆರು ತಿಂಗಳಿಂದಲೂ ಹಾಗೆಯೇ ಕೆಟ್ಟು ನಿಂತಿದೆ. ಈ ಕಾರಣದಿಂದಲೇ ಅಲ್ಲಿನ ವೈದ್ಯರು ಆಕೆಗೆ ಶಸ್ತ್ರಚಿಕಿತ್ಸೆ ನೀಡಲು ನಿರಾಕರಿಸಿರುವುದು ಜಿಲ್ಲಾ ಕೇಂದ್ರಗಳಲ್ಲಿರುವ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿನ ಪರಿಸ್ಥಿತಿ ಹೀಗಾಗಬಾರದು. ಆದುದರಿಂದ, ಹಾಗೇನಾದರೂ ಯಂತ್ರಗಳು ಕೆಟ್ಟು ಹೋದರೆ, ಕೂಡಲೇ ರೋಗಿಗಳಿಗೆ ತೊಂದರೆ ಸಂಭವಿಸದ ರೀತಿಯಲ್ಲಿ ಏನಾದರೂ ಪರ್ಯಾಯ ವ್ಯವಸ್ಥೆ ಮಾಡಬೇಕು, ಅಥವಾ ಇಂಥಾ ಆಸ್ಪತ್ರೆಗಳಲ್ಲಿ ಇಂಥಾ ಎರಡೆರಡು ಯಂತ್ರಗಳನ್ನಾದರೂ ಇಡುವುದಕ್ಕೆ ವ್ಯವಸ್ಥೆ ಮಾಡಬೇಕು. ಆದುದರಿಂದ, ಮಾನ್ಯ ಮಂತ್ರಿಗಳು ತೊಂದರೆಗಳನ್ನು ನಿವಾರಣೆ ಮಾಡುತ್ತೇನೆ ಮತ್ತು ಎರಡೆರಡು ಯಂತ್ರಗಳನ್ನು ಇಡುತ್ತೇನೆ ಎಂದು ಆಶ್ವಾಸನೆ ಕೊಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ವಿಚಾರ ಮಾಡುತ್ತೇನೆ.

Report of the J. S. C. on Karrataka (Sandur Area) Lands Abolition Bill 1976 Presentation

SRI M. MALLIKARJUNASWAMY (Minister for Education) .—On behalf of the Minister for Revenue, I present the Report of the Joint Select Committee on the Karnataka (Sandur Area) Inams Abolition Bill, 1976.

MADAM SPEAKER —The Report is presented

PRIVATE MEMBERS RESOLUTION

(i) re: establishing Government hostels in each of the taluks, having Colleges.

ಶ್ರೀ ವಿ. ನಂಜಪ್ಪ (ಅರಸೀಕೆರೆ).— ಮಾನ್ಯ ಅಧ್ಯಕ್ಷರೇ, "ಕಾಲೇಜುಗಳಿರುವ ಪ್ರತಿ ತಾಲೂಕು ಕೇಂದ್ರಗಳಲ್ಲಿ ಸರ್ಕಾರಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಬೇಕೆಂದು ಈ ಸಭೆಯವರು ಸರ್ಕಾರದವರಿಗೆ ಶಿಫಾರಸು ಮಾಡುತ್ತಾರೆ" ಎನ್ನುವ ನಿರ್ಣಯವನ್ನು ನಾನು ಸಭೆಯಲ್ಲಿ ಮಂಡಿಸುತ್ತೇನೆ.

MADAM SPEAKER.—Motion moved:

"That this Assembly recommends to Government that Government Hostels be established in each of the Taluk Centres where there are Colleges."

† ಶ್ರೀ ಆನಿವಾಳದ ನಂಜಪ್ಪ.—ಮಾನ್ಯ ಅಧ್ಯಕ್ಷರೇ, ಈ ನಿರ್ಣಯ ಒಪಳ ಅತ್ಯಂತ ಮುಖ್ಯ ವಾದುದು. ಗ್ರಾಮಾಂತರ ಪ್ರದೇಶಗಳಿಂದ, ತಾಲ್ಲೂಕು ಕೇಂದ್ರಗಳಿಗೆ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಬಂದು, ಅವರು ಪಡತಕ್ಕ ಕಷ್ಟ ಮತ್ತು ಬವಣೆಯನ್ನು ನೋಡಿದರೆ, ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸದ ಪ್ರಗತಿ ಕುಂಠಿತವಾಗುತ್ತಿದೆ ಎಂದು ನನಗನ್ನಿಸುತ್ತಿದೆ. ಆದುದರಿಂದ, ಸರ್ಕಾರದವರು ಇದನ್ನು ತೀವ್ರವಾಗಿ ಆಲೋಚನೆ ಮಾಡಿ, ತಾಲ್ಲೂಕು ಕೇಂದ್ರಗಳಲ್ಲಿರುವ ಕಾಲೇಜುಗಳಿಗೆ ಬರುವ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಸೌಲಭ್ಯವನ್ನು—ಅಂದರೆ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಮಾಡದೇ ಹೋದರೆ, ವಿದ್ಯಾಭ್ಯಾಸದ ಪ್ರಗತಿ ಕುಂಠಿತವಾಗುವುದರ ಜೊತೆಗೆ ನಾವು ಏನೂ ಆಸೆ ಪಟ್ಟತ್ತು ಗುರಿ ಇಟ್ಟುಕೊಂಡಿದ್ದೆವು ಅದು ಸಂಪೂರ್ಣವಾಗಿ ವಿಫಲವಾಗುತ್ತದೆ. ಈ ದೃಷ್ಟಿಯಿಂದ ನಾನು ಈ ನಿರ್ಣಯವನ್ನು ಸಭೆಯ ಮುಂದೆ ತರುತ್ತಿದ್ದೇನೆ.

ನಮ್ಮ ರಾಜ್ಯದಲ್ಲಿ ದಿನೇದಿನೇ ಜನಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಆದರಲ್ಲೂ ತಾಲ್ಲೂಕು ಕೇಂದ್ರಗಳಲ್ಲಿ ಜನಸಂಖ್ಯೆ ವಿಪರೀತವಾಗಿ ಏರುತ್ತಿದ್ದು, ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯವಿಲ್ಲದೆ, ಹೋಟೆಲುಗಳಲ್ಲಿ ಒದಗಿಸುವ ಉಪಹಾರ ಮತ್ತು ಆಹಾರ ಬಹಳ ಕೀಳುದರ್ಜೆಯಲ್ಲಿರುವುದರಿಂದ, ವಿದ್ಯಾರ್ಥಿಗಳ ಆರೋಗ್ಯಕ್ಕೂ ಹೆಚ್ಚು ಧಕ್ಕೆ ಉಂಟಾಗುತ್ತಿದೆ. ಅಷ್ಟೇ ಅಲ್ಲದೆ, ವಿದ್ಯಾರ್ಥಿಗಳು ಓದುವುದಕ್ಕೆ ಒಳ್ಳೆಯ ವಾತಾವರಣವುಳ್ಳ ಕೋಣೆಗಳು ದೊರೆಯದೆ, ಅವರ ವ್ಯಾಸಂಗಕ್ಕೆ ಬಹಳವಾಗಿ ತೊಂದರೆಯಾಗುತ್ತಿದೆ. ಈ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಸರ್ಕಾರದವರು ಹೆಚ್ಚು ಹೆಚ್ಚು ಸೌಕರ್ಯಗಳನ್ನು ಒದಗಿಸಿಕೊಡುತ್ತಾ, ಪ್ರೋತ್ಸಾಹ ಕೊಡದೇ ಹೋದರೆ, ಅವರ ವಿದ್ಯಾಭ್ಯಾಸದ ಗುಣಮಟ್ಟ ಕಡಿಮೆಯಾಗುತ್ತದೆ.

ಇದರಲ್ಲಿ ನೂರಕ್ಕೆ ೬೦–೭೫ ಜನ ಗ್ರಾಮಾಂತರ ಪ್ರದೇಶದಲ್ಲಿ ಬಡ ಸ್ಥಿತಿಯಲ್ಲಿದ್ದಾರೆ. ಇಂಥವರ ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತೇಜನ ಹಾಗೂ ಪ್ರೋತ್ಸಾಹ ಕೊಡದೇ ಹೋದರೆ ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸದ ಪ್ರಗತಿಗೆ ಧಕ್ಕೆಯಂಟಾಗುತ್ತದೆ. ಅಷ್ಟೇ ಅಲ್ಲ ವಿದ್ಯಾರ್ಥಿಗಳ, ಯುವಕರ ಆರೋಗ್ಯವನ್ನು ನಾವು ಗಮನದಲ್ಲಿಟ್ಟುಕೊಂಡು ಅವರಿಗೆ ಉತ್ತಮವಾದ ಆಹಾರ, ಉತ್ತಮವಾದ ವಾತಾವರಣವನ್ನು ಕಲ್ಪಿಸಿಕೊಡದೇ ಹೋದರೆ ಅವರ ಸಂಪತ್ತು ದಿನೇ ದಿನೇ ಕ್ಷೀಣಸುವುದರ ಜೊತೆಗೆ ಆರೋಗ್ಯವೂ ನಶಿಸಿ ಹೋಗಿ, ನಮ್ಮ ರಾಜ್ಯಕ್ಕೆ ಬಂದೂ ಶಕ್ತಿ ಬರುತ್ತದೆ, ಒಳ್ಳೆಯದಾಗುತ್ತದೆಂದೂ ನಾವು ಏನು ನಿರೀಕ್ಷಣೆ ಮಾಡಿದ್ದೆವೋ? ಆ ನಿರೀಕ್ಷೆ ಪೂರ್ಣವಾಗಿ ನಾಶವಾಗುತ್ತದೆ, ತಪ್ಪುಗುತ್ತದೆ, ಸುಳ್ಳಾಗುತ್ತದೆ. ವಿದ್ಯಾರ್ಥಿಗಳಿಗೆ ಮತ್ತು ಯುವಕರಿಗೆ ಚಿಕ್ಕ ವಯಸ್ಸಿನಲ್ಲಿ ಉತ್ತಮವಾದ ಆಹಾರ ಹಾಗೂ ಒಳ್ಳೆಯ ವಾತಾವರಣದ ವ್ಯವಸ್ಥೆ ಮಾಡುವ ಮುಖೇನ ಒಳ್ಳೆಯ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎನ್ನುವ ದೃಷ್ಟಿಯಿಂದ ಈ ನಿರ್ಣಯ ತಂದಿದ್ದೇನೆ; ಬಹುಶಃ ಇದು ವಿವಾದಾಸ್ಪದವಾದ ನಿರ್ಣಯ. ಈ ನಿರ್ಣಯಕ್ಕೆ ಎಲ್ಲಾ ಮಾನ್ಯ ಸದಸ್ಯರು ಒಪ್ಪಿಗೆಕೊಟ್ಟು; ಸರ್ಕಾರಕ್ಕೆ ಶಿಫಾರಸ್ಸು ಮಾಡಿ; ಯಾವ ಯಾವ ತಾಲ್ಲೂಕುಗಳಲ್ಲಿ ಕಾಲೇಜುಗಳು ಇವೆ; ಅಲ್ಲಿ ಒಂದೊಂದು ಸರ್ಕಾರಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡಿ ಅಲ್ಲಿ ಉಚಿತ ವಿದ್ಯಾಭ್ಯಾಸ ಊಟ ವಸತಿ ಸೌಕರ್ಯಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳಿ; ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ಈ ನಿರ್ಣಯಕ್ಕೆ ಒಮ್ಮತದ ಸಹಾಯ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

10-30 P. M.

† ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್ (ಹೊಸನಗರ) —ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ವಸಿವಾಳ ನಂಜಪ್ಪನವರು ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಅರಡು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ನಂಜಪ್ಪನವರು ಮಾತನಾಡುವಾಗ ವಿದ್ಯಾರ್ಥಿಗಳ ಕಷ್ಟಕಾರ್ಪಣ್ಯದ ಬಗ್ಗೆ ಹೇಳಿದರು; ನಾನು ಅದಕ್ಕಿಂತ ಹೆಚ್ಚಿಗೆ ಸ್ವಲ್ಪ ಹೊಸ ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಶಿಕ್ಷಣವನ್ನು ನಾವು ಯುವಕರಿಗೆ ಕೊಡುವಾಗ ರಾಷ್ಟ್ರೀಯ ಹೆಮ್ಮೋಭಾವ ಬೆಳೆಸಕ್ಕ ಪ್ರವೃತ್ತಿಯನ್ನು ಅವರಲ್ಲಿ ಒಡಮೂಡಿಸದೇ ಹೋದರೆ ಈ ದೇಶದ ರಕ್ಷಣೆ ಮಾಡುವುದಕ್ಕೆ ದೇವರೇ ಗತಿ. ಎಲ್ಲಿ ನೋಡಿದರೂ ಕೂಡ ಜಾತೀಯ ಹಾಸ್ಟೆಲುಗಳು ನಿರ್ಮಾಣ ವಾಗುತ್ತದೆ. ಎಲ್ಲ ಕೋಮಿಗೆ ಸಂಬಂಧಪಟ್ಟಾಗೆ ಸಮಗ್ರವಾಗಿ ಕಾಲೇಜು ಹಾಸ್ಟೆಲುಗಳ ನಿರ್ಮಾಣ ಸ್ವಾಗತಗೊಂಡಿರುವುದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ. ಯಾವತ್ತು ನಾವು ಭಾರತೀಯರು ಎಂದು ಹೇಳಿಕೊಳ್ಳತಕ್ಕ ಭಾವನೆ ಬೆಳೆಸಿಕೊಳ್ಳಬಹುದು ಎನ್ನುವುದೂ ನನಗಂತೂ ಅರ್ಥವಾಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ೧೯೫೬ ಇರಬೇಕು. ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದೆವು ಆಗ ಕರ್ನಾಟಕ ಏಕೀಕರಣದ ಪ್ರಶ್ನೆ ಉದ್ಭವಿಸಿತು. ಕರ್ನಾಟಕ ಏಕೀಕರಣದ ಪ್ರಶ್ನೆ ಬಂದಾಗ ಎರಡು ಕೋಮಿನ ವಿದ್ಯಾರ್ಥಿನಿಲಯಗಳು ನಡೆದುಕೊಂಡ ರೀತಿಯನ್ನು ನೋಡಿದರೆ ನನ್ನ ಮನಸ್ಸಿನಲ್ಲಿ ಇವತ್ತಿಗೂ ಆ ದೃಶ್ಯ ಆಚ್ಚಳಿಯದೆ ನಿಂತಿದೆ ಆಗ ಎರಡು ಪತ್ರಿಕೆಗಳು ಪ್ರಕಟವಾಗುತ್ತಿದ್ದವು? ಒಂದು ವಿಶ್ವವಾಣಿ ಪತ್ರಿಕೆ, ಇನ್ನೊಂದು ಪತ್ರಿಕೆ ಮರೆತು ಹೋಗಿದೆ. ಒಂದು ಪತ್ರಿಕೆಯನ್ನು ಒಂದು ಹಾಸ್ಟೆಲಿನವರು ಸುಡುವುದು ಇನ್ನೊಂದು ಪತ್ರಿಕೆಯನ್ನು ಇನ್ನೊಂದು ಹಾಸ್ಟೆಲಿನವರು ಸುಡುವದು? ಇಂಥ ನೀತಿಯ ಪ್ರವೃತ್ತಿ ಇವತ್ತಿನ ದಿನದಲ್ಲಿಯೂ ಇದೆ. ಸಂಪೂರ್ಣವಾಗಿ ವಾಸಿಯಾಗಿದೆ ಎಂದೂ, ಆದರಿಂದ ವಿಮುಕ್ತರಾಗಿದ್ದೇವೆ ಎಂದು ಹೇಳತಕ್ಕಂಥ ಭಾವನೆ ಇಟ್ಟುಕೊಳ್ಳುವುದು ಕಷ್ಟ ಯಾವ ಊರಿನಲ್ಲಿ ನೋಡಿದರೂ ಕೂಡ ಎಲ್ಲೆಲ್ಲಿ ಕಾಲೇಜುಗಳು ಇವೆ; ಅಲ್ಲಿ ಕೋಮವಾರು ಹಾಸ್ಟೆಲುಗಳನ್ನು ತೆರೆದಿದ್ದಾರೆ. ಒಂದು ಕೋಮಿನವರೆಗೆ ಮತ್ತು ಇನ್ನೊಂದು ಕೋಮಿನವರೆಗೆ ಮಧುರಭಾಂದವ್ಯ ಬೆಳೆಸತಕ್ಕ ವ್ಯವಸ್ಥೆ ಈ ದೇಶದಲ್ಲಿ ಇಲ್ಲ. ಯಾವುದೋ ಒಂದು ತಪ್ಪುಮಾಡುತ್ತಿದ್ದೇವೆ ಎಂದು ನನಗಾದರೂ ಅನಿಸುತ್ತದೆ ಇವತ್ತು ನಾನು ಈ ಸದನದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ; ಒಂದು ಗೊತ್ತಾದ ತಾರೀಖಿನಿಂದ ಜಾತಿ ಹಾಸ್ಟೆಲುಗಳನ್ನು ನಡೆಸುವುದನ್ನು ನಿಲ್ಲಿಸಬೇಕು ಪರವಾನಿಗಿ ಕೊಡ ವುದನ್ನು ನಿಲ್ಲಿಸಬೇಕು. ವಿದ್ಯಾರ್ಥಿನಿಲಯಗಳನ್ನು ವಿಶ್ವವಿದ್ಯಾನೀಯದವರು ಮತ್ತು ಸರ್ಕಾರದವರು ಎಲ್ಲಾ ಕೋಮಿನವರಿಗೂ ಸೇರಿದಂತೆ ತೆರೆಯಬೇಕು, ನಾನು ಈ ವಿಧಾನವನ್ನು ಮಂಡಿಸುವುದಕ್ಕೆ ಇಚ್ಛಿಸಿದ್ದೇನೆ. ನಾವು ೨೧ನೇ ಶತಮಾನದಲ್ಲಿ ಕಾಲಿಡುತ್ತಿದ್ದರೂ ಈ ದೇಶ ನಡೆಯಬೇಕಾದ ರೀತಿಯಲ್ಲಿ ನಡೆದುಕೊಂಡು ಹೋಗುತ್ತಿಲ್ಲ ಎನ್ನುವ ಸಂಶಯ ನನಗೆ ಇದೆ. ವಿಶ್ವದಲ್ಲಿ ಎಲ್ಲಾ ರಾಜ್ಯಗಳು ಮಂಗಳ ಗ್ರಹಕ್ಕೆ ಹೋಗುವ ಕಾಲದಲ್ಲಿ. ನಾವು ನಮ್ಮ ಯುವಕರ ಮನೋಭಾವ ಬದಲಾವಣೆ ಮಾಡತಕ್ಕ ಕ್ರಾಂತಿಕಾರಕವಾದ ಯೋಜನೆಯನ್ನು ಸಮಾಜದಲ್ಲಿ ಒಳಮೂಡಿಳುವುದಕ್ಕೆ ಪ್ರಯತ್ನ ಮಾಡಬೇಕು. ಆ ದೃಷ್ಟಿಯಿಂದ ಇವತ್ತು ಕಾಲೇಜು ವಿದ್ಯಾರ್ಥಿನಿಲಯಗಳನ್ನು ತರಲೇಬೇಕು ಎನ್ನುವುದು ಅವಶ್ಯಕವಾಗಿ ನನ್ನ ವಾದ. ನಮ್ಮ ಶಿವಮೊಗ್ಗದಲ್ಲಿಯೂ ಕೂಡ ಜಾತಿಯ ಹಾಸ್ಟೆಲುಗಳು ಇವೆ; ನಾನು ನೋಡಿರತಕ್ಕ ವಿಚಾರ. ಒಂದು ಕೋಮಿನ ಜೊತೆಗೆ ಬರತಕ್ಕಂಥ ಭಾವನೆ ಇನ್ನೂ ಅವರಿಗೆ ಬರಂತ್ತಾ ಇಲ್ಲ. ಇದು ಬಹಳ ದಟಿಷ್ಟಿಕರವಾದ ವಿಚಾರ. ಇದನ್ನು ಅಮೂಲಾಗ್ರವಾಗಿ ಒದಲಾವಣೆ ಮಾಡದೆಹೋದರೆ ಮುಂದಿನ ಪೀಳಿಗೆ ಇದನ್ನು ಅನುಭವಿಸುವ ಕಾಲ ಬಂದೀತು ಎನ್ನುವ ದೃಷ್ಟಿಯಿಂದ ಇಂಥ ಕಾಲೇಜು ಹಾಸ್ಟೆಲುಗಳನ್ನು ನಿರ್ಮಾಣ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಅಲ್ಲದೆ ನಂಜಪ್ಪನವರು ವಿದ್ಯಾರ್ಥಿಗಳ ಕಷ್ಟಕಾರ್ಪಣ್ಯದ ಬಗ್ಗೆ ಸವಿವರವಾಗಿ ಹೇಳಿದ್ದಾರೆ; ಅದರ ಬಗ್ಗೆಯೂ ಗಮನಿಸಬೇಕು; ನಾನು ಆ ವರ ನಿಲುವಳಿಯನ್ನು ಸಂಪೂರ್ಣವಾಗಿ ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜೆ. ಎಲ್. ಕಬಾಡೆ (ಬಳ್ಳಿಳ್ಳಿ). —ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜಪ್ಪನವರು ತಂದಿರತಕ್ಕ ಠರಾವಿಗೆ ಬೆಂಬಲ ನೀಡುತ್ತಾ ಕಾಲೇಜುಗಳು ಇರುವ ಕಡೆ ಒಂದೊಂದು ಹಾಸ್ಟೆಲುಗಳನ್ನು ವಿದ್ಯಾರ್ಥಿಗಳಿಗಾಗಿ ತೆರೆಯಬೇಕು ಎನ್ನುವ ಸೂಚನೆ ಯೋಗ್ಯವಾದ ಸೂಚನೆ ಆಗಿದೆ ಎಂದು ಹೇಳಬಯಸುತ್ತೇನೆ ಇದರ ಬಗ್ಗೆ ನಾನು ಮಾತನಾಡಬೇಕಾದ ಅವಶ್ಯಕತೆ ಏನು ಎಂದರೆ, ಮೊದಲು ವಿದ್ಯಾವಂತರು ಮತ್ತು ಬುದ್ಧಿವಂತರು ಯಾರಾದರೂ ಊರಿನಲ್ಲಿ ಕಂಡುಬಂದರೆ ಅವರಿಗೆ ವಾರದ ಮನೆ

ವ್ಯವಸ್ಥೆ ಮಾಡುವ ಭಾವನೆ ಇರುತ್ತಿತ್ತು. ಈಗ ಆ ಪರಿಸ್ಥಿತಿ ಇಲ್ಲ. ಇವತ್ತು ವಿದ್ಯಾರ್ಜನೆಗೆ ಯೋಗ್ಯವಾದ ಹಾಗೂ ಹಳ್ಳಿಯಲ್ಲಿ ಇರತಕ್ಕ ಮಕ್ಕಳಿಗೆ ಹಿಂದುಳಿದ ಮಕ್ಕಳಿಗೆ ಅದರಲ್ಲಿಯೂ ನಿಮ್ನವರ್ಗದ ಮಕ್ಕಳ ಗತಿ ಬಹಳ ಕಷ್ಟವಾಗಿದೆ. ಪೆಟ್ರಿಕ್‌ವರೆಗೂ ಹೋಗಬೇಕಾದರೆ ಬಹಳ ಕಷ್ಟ. ಕಾಲೇಜಿನವರೆವಿಗೂ ಹೋಗುವುದಕ್ಕೆ ಆಗದೆ ಕೂಲಿ ಮಾಡತಕ್ಕ ಪರಿಸ್ಥಿತಿ ಉದ್ಭವವಾಗಿದೆ ಅದಕ್ಕೋಸ್ಕರ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೊಂದು ಹಾಸ್ಟೆಲುಗಳನ್ನು ತೆರೆಯಬೇಕೆನ್ನುವ ಸೂಚನೆ ಯೋಗ್ಯವಾಗಿದೆ. ಅದುದರಿಂದ ಸರ್ಕಾರ ಶೀಘ್ರಗತಿಯಲ್ಲಿ ಕಾಲೇಜು ಇರುವ ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲೂ ಒಂದೊಂದು ಹಾಸ್ಟೆಲು ಗಳನ್ನು ಸಾ ಏಪಿಸಿಕೊಡಬೇಕೆಂದು ಪ್ರಾರ್ಥಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ (ವಿದ್ಯಾ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಅನಿವಾಳದ ನಂಜಪ್ಪನವರು ಈ ಒಂದು ನಿರ್ಣಯವನ್ನು ತೆಗೆದುಕೊಂಡು ಬಂದು ಮಾತನಾಡಿದ್ದಾರೆ, ಹಾಗೆ ಇತರ ಮಾನ್ಯ ಸದಸ್ಯರಾದಂಥ ಶೀರನಾಳಿ ಚಂದ್ರಶೇಖರಯ್ಯನವರು, ಕಬಾಡೆಯವರು ಈ ಒಂದು ನಿರ್ಣಯದ ವಿಷಯವಾಗಿ ಮಾತನಾಡಿ ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಸದಸ್ಯರಾದಂಥ ಅನಿವಾಳದ ನಂಜಪ್ಪನವರು ಮಾತನಾಡುತ್ತಾ ವಿದ್ಯಾಭ್ಯಾಸ ಪ್ರಗತಿಯಾಗಬೇಕಾದರೆ ವಿದ್ಯಾರ್ಥಿನಿಲಯಗಳು ಹೆಚ್ಚು ಇರಬೇಕು. ಈಗ ಗ್ರಾಮಾಂತರ ಪ್ರದೇಶದವರು ಉನ್ನತ ಶಿಕ್ಷಣಕ್ಕೆ ಪಟ್ಟಣಗಳಿಗೆ ಹೋಗಿ ವಿದ್ಯಾರ್ಥಿ ನಿಲಯಗಳು ಇಲ್ಲದೇ ಇರುವುದರಿಂದ ಬೇರೆ ಕೊಠಡಿಗಳನ್ನು ಮಾಡಿಕೊಂಡು ವಾಸ ಮಾಡುತ್ತಾರೆ. ಅವರಿಗೆ ಒಂದು ಸರಿಯಾದ ವಾತಾವರಣ ಇಲ್ಲದೇ ಇರುವುದರಿಂದ, ವಿದ್ಯಾಭ್ಯಾಸದ ಪ್ರಗತಿ ಬಹಳಮಟ್ಟಿಗೆ ಕುಂಠಿತವಾಗುತ್ತಿದೆ ಎಂದು ಹೇಳುತ್ತಾ, ಅವರು ಯುವಕರ ಆರೋಗ್ಯ ಮತ್ತು ಅವರಿಗೆ ಒಳ್ಳೆಯ ತರಬೇತಿ ಕೊಡತಕ್ಕದ್ದು ಇನ್ನು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಶೀರನಾಳಿ ಚಂದ್ರಶೇಖರಯ್ಯನವರು ಮಾತನಾಡುತ್ತಾ ಹೊಸ ವಿಚಾರ ಹೇಳುತ್ತೇನೆ ಎಂದು ಇರತಕ್ಕ ವಿಚಾರ ಹೇಳಿ ಬಿಟ್ಟರೆಯೇ ವಿನಹ ಹೊಸದೇನನ್ನು ಹೇಳಿಲ್ಲ, ಅವರು ಮಾತನಾಡುತ್ತಾ ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಸುವುದಕ್ಕೆ ಸಹಾಯವಾಗತಕ್ಕಂಥ, ಉನ್ನತ ಶಿಕ್ಷಣ ಪಡೆಯತಕ್ಕಂಥ ವಿದ್ಯಾರ್ಥಿಗಳು ಒಂದು ಕಡೆ ಇರಬೇಕು ಸಮಗ್ರ ಮಕ್ಕಳೆಲ್ಲರೂ ಒಂದೇ ವಿದ್ಯಾರ್ಥಿ ನಿಲಯದಲ್ಲಿ ಇರಬೇಕು. ಈ ಜಾತಿ ಹಾಸ್ಟೆಲುಗಳ ನಿರ್ಮಾಣ ಆಗಬಾರದು ಎಂದು ಹೇಳಿದ್ದಾರೆ. ಸರ್ಕಾರದ ಗ್ರಾಂಟ್ ಹೊರತು ಯಾವುದೇ ಇಲ್ಲದೆ ಆಯಾಯ ಜನಾಂಗದ ಜನರು ಸೇರಿಂದೆ ಬಂದು ಹಾಸ್ಟೆಲು ನಡೆಸಿಕೊಂಡರೆ ಅದಕ್ಕೆ ಯಾವ ಅಡ್ಡಿ ಇಲ್ಲ. ಈಗ ಸರ್ಕಾರ ಗ್ರಾಂಟ್ಸ್ ಕೊಡುವ ಕಡೆ ಎಲ್ಲರಿಗೂ ಹಾಸಲು ಸ್ಥಾನ ಕೊಡಬೇಕು ಎಂದು ಸರ್ಕಾರ ಮಾಡಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಪ್ರಥಮವಾಗಿ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಉನ್ನತ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು ಎಂದು ೧೬ ಹಾಸ್ಟೆಲುಗಳಲ್ಲಿ ಕಾಲೇಜು ವಿದ್ಯಾಭ್ಯಾಸ ಮಾಡತಕ್ಕವರಿಗೆ ಸಾಕಷ್ಟು ಹಣ ಒದಗಿಸಿದ್ದೇವೆ. ಕಳೆದ ವರ್ಷ ೧೧ ಹಾಸ್ಟೆಲು ಈ ವರ್ಷ ೫ ಹಾಸ್ಟೆಲು, ಮತ್ತೆ ಹಾಸನ ಜಿಲ್ಲೆಗೂ ಕೂಡ ಹಾಸ್ಟೆಲು ಕೊಟ್ಟಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನಾದರೂ ಇಷ್ಟಪಡುತ್ತೇನೆ. ಇನ್ನು ೬ ಜಿಲ್ಲೆಗಳಲ್ಲಿ ಹಾಸ್ಟಲು ಕೊಡಬೇಕಾಗುತ್ತದೆ. ದಾವಣಗೆರೆ, ಮೈಸೂರು ಎರಡು ಹಾಸ್ಟಲು ಕೊಡಬೇಕಾಯಿತು. ಈಗ ೬ ಜಿಲ್ಲೆಗಳಲ್ಲೂ ಕೂಡ ಕೆಲಸ ಮುಗಿಯಬೇಕಾಗಿದೆ ಈಗ ೧೦೦ ಕೋಟಿ ರೂಪಾಯಿ ಇಟ್ಟಿದ್ದು, ೧೨೦ ಕೋಟಿ ರೂಪಾಯಿ ಆಗಿದೆ. ಬಿಜಾಪುರದಲ್ಲೂ ಕೂಡ ೫ ಲಕ್ಷ ೭೫ ಸಾವಿರ ರೂಪಾಯಿ ಹೆಚ್ಚಿದಲ್ಲಿ ಒಂದು ಹಾಸ್ಟಲು ಕೊಟ್ಟಿದ್ದೇವೆ. ಶಿವಮೊಗ್ಗಕ್ಕೆ ೭ ಲಕ್ಷ ರೂಪಾಯಿ ಅಂದಾಜಿನ ಒಂದು ಹಾಸ್ಟಲು ಕೊಟ್ಟಿದ್ದೇವೆ ಎಂದು ಹೇಳುತ್ತೇನೆ. ಇನ್ನು ೬ ಜಿಲ್ಲಾ ಕೇಂದ್ರದಲ್ಲಿ ಹಾಸ್ಟಲುಗಳನ್ನು ತೆರೆಯತಕ್ಕದ್ದು ಇದೆ. ಹೀಗೆ ಹಾಸ್ಟಲುಗಳ ಬಗ್ಗೆ ಲಕ್ಷಾಂತರ ರೂಪಾಯಿ ಖರ್ಚು ಬರುತ್ತದೆ, ಜನರಲ್ ಹಾಸ್ಟಲು ಕೊಡತಕ್ಕದನ್ನು ಪ್ರಪ್ರಥಮವಾಗಿ ಪರಿಕಲ್ಪಿಸಿಕೊಂಡು ಅದನ್ನು ಕೂಡ ಕೊಡುತ್ತೇವೆ. ಹೀಗೆ ಜಿಲ್ಲಾ ಕೇಂದ್ರದಲ್ಲಿ ಕೊಡತಕ್ಕ ಒಂದು ಕೆಲಸ ಮುಗಿದಮೇಲೆ ತಾಲೂಕ್ ಮಟ್ಟಸ್ಥಕ್ಕೆ ಹೋಗಬಹುದಕ್ಕೆ ಸಾಧ್ಯ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನಾವು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಕೊಡಬೇಕು ಎಂದು ಅವರಿಗೆ ಬೇಕಾದಂತ ವಾತಾವರಣ ಒದಗಿಸುವುದಕ್ಕೆ ಈ ಹಾಸ್ಟಲುಗಳನ್ನು ನಾವು ಮಾಡಿರತಕ್ಕಂಥದ್ದು ಈ ಕಮ್ಯೂನಲ್ ಬ್ಯಾರಿಯರ್ಸ್ ಏನಿದೆ ಇದನ್ನು ತೆಗೆದುಹಾಕಬೇಕು ನಾವು ಒಂದೇ ದೇಶದವರು, ಒಂದೇ ಜನಾಂಗದವರು ಎಂಬ ಭಾವನೆ ಬರಬೇಕು ಎಂದು ಸಾರ್ವಜನಿಕರ ಹಾಸ್ಟಲು ತೆರೆಯತಕ್ಕ ಯೋಜನೆಯನ್ನು ಸರ್ಕಾರದವರು ಹಾಕಿಕೊಂಡಿರತಕ್ಕದ್ದು ಎಂದು ಹೇಳಿ ಮಾನ್ಯ ಸದಸ್ಯರು ಈ ನಿರ್ಣಯವನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

† **ಶ್ರೀ ಅನಿವಾಳ ಎ, ನಂಜಪ್ಪ.**—ಮಾನ್ಯ ಅಧ್ಯಕ್ಷರೇ. ಮಾನ್ಯ ಸಚಿವರು ಈಗಾಗಲೇ ವಿಷದೀಕರಿಸಿದ ಪ್ರಕಾರ ನನ್ನ ವಿಶೇಷವಾದ ಒಂದು ಪ್ರಾರ್ಥನೆ ಏನೆಂದರೆ ಸುಮಾರು ಒಂದೂವರೆ ಲಕ್ಷ, ಎರಡು ಲಕ್ಷ. ಎರಡೂವರೆ ಲಕ್ಷ ಜನಸಂಖ್ಯೆ ಇರತಕ್ಕ ತಾಲೋಕ್ ಕೇಂದ್ರಗಳಲ್ಲಿ ಈ ಹಾಸ್ಟಲುಗಳನ್ನು ಮಾಡದೇ ಹೋದರೆ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ. ಹೆಚ್ಚು ಹೆಚ್ಚು ಜನಸಂಖ್ಯೆ ಇರತಕ್ಕ ತಾಲೋಕುಗಳನ್ನು ತೆಗೆದುಕೊಂಡು ಅಲ್ಲಿ ಈ ಯೋಜನೆ ಸರ್ಕಾರ ಕೈಗೊಳ್ಳಬೇಕು ಮತ್ತೆ ಕೆಲವು ವಿದ್ಯಾರ್ಥಿ ನಿಲಯಗಳಲ್ಲಿ ಇತರರನ್ನು ಸೇರಿಸಿಕೊಳ್ಳದೇ ತೊಂದರೆ ಕೊಡುತ್ತಿದ್ದಾರೆ, ಇಂತಹ ಸಂದರ್ಭದಲ್ಲಿ ಆ ಹಾಸ್ಟಲುಗಳಿಗೆ ಗ್ರಾಂಟ್ಸ್ ಕೊಡುವುದನ್ನು ನಿಲ್ಲಿಸಬೇಕು. ಗ್ರಾಂಟ್ಸ್ ಕೊಟ್ಟರು ಕೂಡ ಕಡ್ಡಾಯವಾಗಿ ವಿದ್ಯಾರ್ಥಿಗಳನ್ನು ಹಾಸ್ಟಲುಗಳಲ್ಲಿ ಸೇರಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಈಗ ಸರ್ಕಾರ ಈ ಒಂದು ಯೋಜನೆಯನ್ನು ತಾಲೋಕ್ ಕೇಂದ್ರದಲ್ಲಿ ಕ್ರಮೇಣ ಜಾರಿಗೆ ತರುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಆದುದರಿಂದ ಆದರಲ್ಲಿ ನಂಬಿಕೆ ಇಟ್ಟುಕೊಂಡು, ಹೆಚ್ಚು ಜನಭರಿತ ಇರತಕ್ಕ, ಎರಡೂವರೆ ಲಕ್ಷ ಜನರು ಇರತಕ್ಕ ಸ್ಥಳದಲ್ಲಿ ಈ ಒಂದು ಯೋಜನೆಯನ್ನು ಹಾಕಿಕೊಳ್ಳುತ್ತಾರೆ ಎಂಬ ನಂಬಿಕೆಯನ್ನು ಇಟ್ಟುಕೊಂಡು ಈ ನಿರ್ಣಯವನ್ನು ವಾಪಸ್ಸು ತೆಗೆದು ಕೊಳ್ಳುತ್ತೇನೆ.

MADAM SPEAKER.—Is it the pleasure of the House that leave be granted to withdraw the resolution"?

Hon'ble Members.—Yes.

The Resolution was, by Leave, withdrawn

(*ii*) *re: Introducing total Prohibition in the State.*

ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೊಳಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಟ್ಟಿದ್ದಾರೆ. —

MADAM SPEAKER.—Motion moved.

that this Assembly is of the opinion that total Prohibition be Introduced in the State.

† **ಶ್ರೀ ಕೆ. ಪ್ರಭಾಕರ್.**—ಅಧ್ಯಕ್ಷರೇ, ಈ ಪಾನ ನಿರೋಧ ವಿಚಾರದಲ್ಲಿ ಅನೇಕ ಸಲ ಈ ಸಭೆಯಲ್ಲಿ ನಾನಾ ರೀತಿಯಲ್ಲಿ ಚರ್ಚೆಗಳು ನಡೆದಿವೆ. ಪ್ರಶ್ನಾವಳಿ ಮಂಡನಾಂತರ, ಅಲ್ಪಾವಧಿ ಕಾಲದ ಪ್ರಶ್ನೆ ಮುಖಾಂತರ ಚರ್ಚೆ ನಡೆದು ಸರ್ಕಾರದವರು ಸ್ವಲ್ಪ ಮಟ್ಟಿಗೆ ಒಂದೇ ವಿದವಾದ ನಿಲುವು ಮತ್ತು ಉತ್ತರವನ್ನು ಕೊಡುತ್ತಾ ಬಂದಿದ್ದಾರೆ. ಇವೊತ್ತು ಬಡವರು, ದೀನದಲಿತರು, ಕುಡಿತಕ್ಕೆ ಈಡಾಗಿ ವಿನಾಶವಾಗಿದ್ದಾರೆ, ಸಾಮಾಜಿಕವಾಗಿ ಜನರು ನರಳಾಡುತ್ತಾ ಇರತಕ್ಕದ್ದು ನಿರ್ವಿವಾದ ವಿಚಾರ. ಇಷ್ಟಾದರೂ ಕೂಡ, ಸರ್ಕಾರ ಕೊಡತಕ್ಕ ಉತ್ತರದಲ್ಲಿ ಪಾನ ನಿರೋಧ ಜಾರಿಗೆ ತರತಕ್ಕ ಬಗ್ಗೆ ಒಪ್ಪಿದರೂ ಕೂಡ ರಾಜಭಾರ ನಡೆಸುವುದಕ್ಕೂ, ಹಾಗೂ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೂ ಎಷ್ಟು ಹಣ ದೇಶದಲ್ಲಿ ಬೇಕಾಗುತ್ತದೆ; ಅಷ್ಟು ಹಣ ಹೊಂಚಿಕೊಳ್ಳುವುದು ಕಷ್ಟವಾಗಬಹುದು ಎಂದು ಈ ಒಂದು ಧೋರಣೆಯಿಂದ ಹೇಳುತ್ತಾರೆ.

ಆದರೆ ಈ ಒಂದು ಪ್ರಗತಿಪರವಾದ ಯೋಜನೆಗಳಿಂದ ದೇಶಕ್ಕೆ ಹಾಗೂ ಬಡವರಿಗೆ ಏನೊಂದು ಸಹಾಯವಾಗಿ ಅವರ ಕಲ್ಯಾಣ ಸಾಧನೆಯಾಗುತ್ತದೋ ಅವರು ಈ ಬಗ್ಗೆ ಏನು ನಂಬಿದ್ದಾರೋ ಅದೆಲ್ಲಕ್ಕಿಂತಲೂ ಜಾಸ್ತಿಯಾಗಿ ಈ ಕುಡಿತದ ಹಾವಳಿಯಿಂದ ಆಗತಕ್ಕಂಥಾ ಹಾನಿ ಜಾಸ್ತಿಯಾಗುತ್ತದೆ ಎಂದು ನಾವು ನಿರ್ವಿವಾದವಾಗಿ ಒಪ್ಪಬೇಕಾಗಿದೆ. ಈ ಒಂದು ಬಾಧೆಯಿಂದ ಸರ್ಕಾರಕ್ಕೆ ಸುಮಾರು ೫೦ ಕೋಟಿ ರೂಪಾಯಿ ವರಮಾನ ಬರುತ್ತದೆ ಎಂದು ಅವರು ಹೇಳುತ್ತಿದ್ದಾರೆ ಮಂತ್ರಿ ಯಾರಾದರೂ ಇದನ್ನು ಕೊಟ್ಟರೆ ಮತ್ತು ಇದನ್ನು ಜಾರಿಗೆ ತರಬೇಕು ಎನ್ನುವ ಆಸೆ ನಮಗೂ ಇದೆ ಎಂದು ಸರ್ಕಾರದವರು ಉತ್ತರ ಹೇಳುವ ಕಾಲದಲ್ಲಿ ಈ ರೀತಿ ಹೇಳುವುದು ಉಂಟು. ಆದರೆ ಈ ವಾದವನ್ನು ಸಂಪೂರ್ಣವಾಗಿ ತಿಳಿಂವಳಿಕೆ ಉಳ್ಳಂಥಾವರು, ಈ ಕುಡಿತದಿಂದ ಉಂಟಾಗತಕ್ಕಂಥಾ ಹಾನಿ ಏನು ಇದೆ ಎಂದು ತಿಳಿದು ಕೊಂಡಂಥಾವರು ಇದನ್ನು ಒಪ್ಪುವುದಿಲ್ಲ. ಈಪ್ರೊತ್ಸಾ ಸರ್ಕಾರಕ್ಕೆ ಸುಮಾರು ೪೦೦–೫೦೦ ಕೋಟಿ